ದಿನಾಂಕ 30-12-2008ನೇ ಮಂಗಳವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

-----------

ವಿಷಯ: 404: ಹಿಂದಿನ ಸಾಮಾನ್ಯ ಸಭೆಯ ನಡವಳಿ (29-11-2008) ಮತ್ತು ಸ್ಥಾಯಿಸಮಿತಿ ಸಭೆಯ ನಡವಳಿ(18-12-2008)ಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 405: ಸಪ್ಟೆಂಬರ್ ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ:406: ದಿನಾಂಕ 23-11-2008ರಂದು ಮಾನ್ಯ ಜಿಲ್ಲಾಧಿಕಾರಿಯವರು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿದಂತೆ ಕಿರಿಯ ಅಭಿಯಂತರರು, ಅಕೌಂಟೆಂಟ್ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಖಾಸಗಿ ಏಜೆನ್ಸಿ ಮುಖಾಂತರ ನೇಮಕ ಮಾಡಿಕೊಳ್ಳುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಜಿಲ್ಲಾಧಿಕಾರಿಯವರ ಅನುಮತಿ ಪಡೆದು ನೇಮಕ ಮಾಡಿಕೊಳ್ಳುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ:407: ಉಳ್ಳಾಲ ಪುರಸಭೆ ವ್ಯಾಪ್ತಿಯ 23ನೇ ವಾರ್ಡಿನ ಕೆರೆಬೈಲು ಎಂಬಲ್ಲಿ ನಾಗಿಣಿ ಮನೆ ಬಳಿ ಕೊಳವೆಬಾವಿ ರಚನೆ ಕುರಿತು ಸ್ಥಳೀಯ ಸದಸ್ಯರಾದ ಸುಹಾಸಿನಿ.ಜೆ. ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನೀರಿನ ಅಭಾವವಿರುವುದರಿಂದ ಅಂದಾಜುಪಟ್ಟಿ ತಯಾರಿಸಿ ಕೊಳವೆಬಾವಿ ರಚನೆ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ:408: ದಿನಾಂಕ 11-12-2008ರಂದು ತೊಕ್ಕೋಟ್ಟು ವಾಣಿಜ್ಯ ಸಂಕೀರ್ಣದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ವಿಚಾರದ ಕುರಿತು.
ನಿರ್ಣಯ: 1) ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ಸು ಸಂಚಾರ ನಿರ್ವಾಹರಿಗೆ ತೊಂದರೆಯಾಗದ ರೀತಿಯಲ್ಲಿ ಸಾರ್ವಜನಿಕ ದೂರವಾಣಿ, ತಂಪುಪಾನೀಯ ಮತ್ತು ಪತ್ರಿಕೆಗಳ ಮಾರಾಟ ಅಂಗಡಿಗಳನ್ನು ನಿರ್ಮಿಸಿ ಹರಾಜುಮಾಡಿ ಕೊಡುವುದು
2) ಬಸ್ಸು ತಂಗುದಾಣಕ್ಕೆ ಆತ್ಯಾಧುನಿಕ ಉನ್ನತ ಮಟ್ಟದ ನವೀನ ರೀತಿಯಲ್ಲಿ ಬಸ್ಸು ನಿಲ್ದಾಣ ಸಂಕೀರ್ಣ ಸಮುಚ್ಚಯ ನಿರ್ವಹಣೆ ಮಾಡುವುದು
3) ಹೆದ್ದಾರಿಯಿಂದ ಬಸ್ಸು ನಿಲ್ದಾಣಕ್ಕೆ ತಿರುಗುವಲ್ಲಿ ರಸ್ತೆಯನ್ನು ಕಾಂಕ್ರೀಟಿಕರಣಗೊಳಿಸುವುದು
4) ಕೋಣಾಜೆ ರಸ್ತೆಯಿಂದ ತೊಕ್ಕೋಟ್ಟು ಬಸ್ಸು ನಿಲ್ದಾಣ ತಿರುಗುವಲ್ಲಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದು
5) ರಸ್ತೆ ಬದಿ ಮತ್ತು ಸರ್ಕಾರಿ ಸ್ಥಳದಲ್ಲಿದ್ದ ವಾಹನ ಸಂಚಾರಕ್ಕೆ ಆಡಚಣೆ ಮಾಡುವಂತಹ ಸಾಮಾಗ್ರಿಗಳನ್ನು ಕೂಡಲೇ ವಿಲೇಗೊಳಿಸುವುದು
6) ಬಸ್ಸು ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸರದಿಯಂತೆ ರಿಕ್ಷಾಗಳನ್ನು ಪಾರ್ಕಿಂಗ್ ಮಾಡುವುದು
7) ಬಸ್ಸು ನಿಲ್ದಾಣದಲ್ಲಿ ಪೋಲೀಸ್ ಚೌಕಿ ನಿರ್ಮಿಸುವರೇ ಅರಕ್ಷಕ ಉಪ ನಿರೀಕ್ಷಕರೊಡನೆ ಚರ್ಚಿಸಿ ಕ್ರಮ ಕೈಗೊಳ್ಳುವುದು
8) ತೊಕ್ಕೋಟ್ಟು ಬಸ್ಸು ನಿಲ್ದಾಣದಿಂದ ವಿಶ್ವ ವಿದ್ಯಾನಿಲಯ ರಸ್ತೆಗೆ ತಿರುಗುವಲ್ಲಿ ಹತ್ತಿರ ದೊಡ್ಡ ವಾಹನಗಳು ಪಾರ್ಕಿಂಗ್ ತೆರವುಗೊಳಿಸಲು ಕ್ರಮಕೈಗೊಳ್ಳುವುದು
9) ಪ್ರಕೃತ ಬಸ್ಸು ನಿಲ್ದಾಣದ ಇಂಟರ್ ಲಾಕ್ ಕಾಮಗಾರಿ ಅಂದಾಜುಪಟ್ಟಿಗಿಂತ ಹೆಚ್ಚುವರಿ ಕಾಮಗಾರಿ ನಿರ್ವಹಿಸಿರುವ ಕಾರಣ ಅಂದಾಜುಪಟ್ಟಿಯ ಶೇ25ರಷ್ಟು ಕಾಮಗಾರಿಯನ್ನು ಹಾಲಿ ಗುತ್ತಿಗೆದಾರರಿಂದ ನಿರ್ವಹಿಸಲು ಕ್ರಮಕೈಗೊಳ್ಳುವುದು ಅಥವಾ ಹೆಚ್ಚುವರಿ ಅಂದಾಜುಪಟ್ಟಿ ರಚಿಸಿ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 409: ಉಳ್ಳಾಲ ಪುರಸಭೆಯ ವ್ಯಾಪ್ತಿಯ 15ನೇ ವಾರ್ಡಿನ ಧರ್ಮನಗರ ತೆಂಗಿನಹಿತ್ಲು ಎಂಬಲ್ಲಿ ಚರಂಡಿಗೆ ತುರ್ತಾಗಿ ತಡೆಗೋಡೆ ನಿರ್ಮಿಸುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ಮಹಾಲಕ್ಷ್ಮಿರವರ ಮನವಿ ಕುರಿತು.

ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಹಣಕಾಸು ಲಭ್ಯವಿದ್ದಲ್ಲಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 410: ಉಳ್ಳಾಲ ಪುರಸಭೆ ಕಚೇರಿಗೆ ನಗರ ನೈರ್ಮಲೀಕರಣಕ್ಕೆ ಅಗತ್ಯವಿರುವ ಬ್ಲೀಚಿಂಗ್ ಪೌಡರ್, ಫಿನಾಯಿಲ್ ಮತ್ತು ಬೈಟೆಕ್ಸ್ ಖರೀದಿಸುವರೇ ಕಿರಿಯ ಆರೋಗ್ಯ ನಿರೀಕ್ಷರ ವರದಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಖರೀದಿಸುವುದಾಗಿ ನಿರ್ಣಯಿಸಲಾಯಿತು

ವಿಷಯ: 411: ಉಳ್ಳಾಲ ಪುರಸಭೆಯ ವ್ಯಾಪ್ತಿಯ 2ನೇ ವಾರ್ಡಿನ ಕೋಡಿ ಎಂಬಲ್ಲಿ ಹಿದಾಯ ತುಸ್ಸಿಬಿಯಾನ್ ಮದ್ರಸಕ್ಕೆ ತಾಗಿ ಇರುವಂತಹ ಒಂದು ದೊಡ್ಡ ಟೊಳ್ಳಾದ ಆಲದ ಮರವಿರುವುದರಿಂದ ಮದ್ರಸದ ಮಕ್ಕಳಿಗೆ ಸಾರ್ವಜನಿಕರಿಗೆ,ವಾಹನಗಳಿಗೆ ಹಾಗೂ ಮದ್ರಸ ಕಟ್ಟಡಕ್ಕೆ ತೊಂದರೆಯಾಗುವುದರಿಂದ ಮರವನ್ನು ಕಡಿಯುವರೇ ಸ್ಥಳೀಯ ಸದಸ್ಯರಾದ ಆಶ್ರಫ್ ಬಾವ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅರಣ್ಯ ಇಲಾಖೆಗೆ ಪತ್ರ ಬರೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

ವಿಷಯ: 412: ಉಳ್ಳಾಲ ಪುರಸಭೆಯ ವ್ಯಾಪ್ತಿಯ 2ನೇ ವಾರ್ಡಿನ ಕೋಡಿ ಎಂಬಲ್ಲಿ ಎಸ್.ಎಫ್.ಸಿ ಪ್ರೋತ್ಸಾಹ ನಿಧಿಯಲ್ಲಿ ನಿರ್ವಹಿಸಲು ಕಾಮಗಾರಿ ಆದೇಶ ನೀಡಿದ್ದು, ಪ್ರಕೃತ ಕುಡಿಯುವ ನೀರಿನ ಕಾಮಗಾರಿ ಅವಶ್ಯಕತೆ ಇಲ್ಲದಿರುವುದರಿಂದ ಅದರ ಬದಲಿಗೆ ಕೋಡಿ ಬದ್ರಿಯಾ ಜುಮ್ಮಾ ಮಸೀದಿಗೆ ಹೈಮಾಸ್ಟ್ ದಾರಿದೀಪವನ್ನು ಅಳವಡಿಸುವರೇ ಸ್ಥಳೀಯ ಸದಸ್ಯರಾದ ಆಶ್ರಫ್ ಬಾವ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ದಾರಿದೀಪವನ್ನು ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 413: ಉಳ್ಳಾಲ ಪುರಸಭೆ ವ್ಯಾಪ್ತಿಯ ಇಸ್ಲಾಹಿ ಮಹಿಳಾ ಸಂಯುಕ್ತ ಪದವಿಪೂರ್ವ ಕಾಲೇಜು ಬಳಿಯಲ್ಲಿ ಬಸ್ಸು ತಂಗುದಾಣವನ್ನು ನಿರ್ಮಿಸುವರೇ ಮುಖ್ಯೋಪಾಧ್ಯಾಯಿನಿ, ಇಸ್ಲಾಹಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲು ಇವರ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಲೋಕೋಪಯೋಗಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ನಂತರ ಅನುಮತಿ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 414: ಉಳ್ಳಾಲ ಪುರಸಭೆ ವ್ಯಾಪ್ತಿಯ 5ನೇ ವಾರ್ಡಿನ ಕೋಡಿ ಕೆಳಗಿನಬೀದಿ ಎಂಬಲ್ಲಿ ಚರಂಡಿಯ ಒಳಗೆ ಪೈಪುಲೈನು ಇದ್ದು, ಅದರಿಂದ ನೀರು ಕಲುಷಿತಗೊಂಡಿರುತ್ತದೆ.ಇದನ್ನು ಬೇರೆ ಕಡೆಯಲ್ಲಿ ಹೊಸ ಪೈಪುಲೈನು ಅಳವಡಿಸುವರೇ ಸ್ಥಾಯಿ ಸಮಿತಿ ಅಧ್ಯಕ್ಷರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 415; ದಿನಾಂಕ 17-12-2008ರಂದು ಉಳ್ಳಾಲ ಪುರಸಭೆಯ ಸಭಾಂಗಣದಲ್ಲಿ ವಿದ್ಯುತ್ ಗುತ್ತಿಗೆದಾರರ ಸಭೆಯ ನಡವಳಿ ಕುರಿತು.
ನಿರ್ಣಯ: ದಿನಾಂಕ 17-12-2008ರ ಸಭೆಯ ನಡವಳಿಯಂತೆ 2008-09 ಮತ್ತು 2009-2010ನೇ ಸಾಲಿನ ಸಾರ್ವಜನಿಕ ದಾರಿದೀಪ ಕಂಬ ವಿಸ್ತರಣಾ ಕಾಮಗಾರಿ ನಿರ್ವಹಿಸುವರೇ ಮಾರುಕಟ್ಟೆ ದರಕ್ಕಿಂತ 8% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಆದುದರಿಂದ ದಾರಿದೀಪಕ್ಕೆ ಅಗತ್ಯವಿರುವ ಸಾಮಾಗ್ರಿಗಳನ್ನು ಕೂಲಿ ದರಗಳಿಗೆ ಮಾರುಕಟ್ಟೆ ದರವನ್ನು ತುಲನಾತ್ಮಕವಾಗಿ ಪರಿಶೀಲಿಸುವರೇ ಮೆಸ್ಕಾಂ ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಿ ಅವರಿಂದ ತಾಂತ್ರಿಕ ಸಲಹೆ ಪಡೆಯುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಷಯ:416: ಉಳ್ಳಾಲ ಪುರಸಬೆಯ ತೊಕ್ಕೊಟ್ಟು ಬಸ್ಸು ನಿಲ್ದಾಣದ ಖಾಲಿ ಸ್ಥಳದಲ್ಲಿ ಸ್ಟಾಲುಗಳ ರಚನೆ ಮಾಡುವರೇ ನಕ್ಷೆ ತಯಾರಿಸುವ ಕುರಿತು.
ನಿರ್ಣಯ: ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನಕ್ಷೆ ತಯಾರಿಸುವುದಾಗಿ ನಿರ್ಣಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು
ವಿಷಯ: 417: ಉಳ್ಳಾಲ ಪುರಸಭೆ ಕಚೇರಿಯ ಸಭಾಂಗಣದ ಕೌನ್ಸಿಲು ಮತ್ತು ಸಭಾಧ್ಯಕ್ಷರ ಮೇಜುಗಳನ್ನು ಒದಗಿಸಲು ಬಂದ ಕೋಟೇಶನುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.

ನಿರ್ಣಯ: ಈ ಬಗ್ಗೆ ಬಂದ ಕೋಟೇಶನುಗಳನ್ನು ಪರಿಶೀಲಿಸಲಾಯಿತು. ಶ್ರೀಮತಿ ಅಪ್ಸಾ ಕೋಂ ರಶೀದ್ ಹಮ್ಮಜ್, ದರ್ಗಾರಸ್ತೆ, ಉಳ್ಳಾಲ ಇವರ ದರ ರೂ. 2,56,418-00 ಕನಿಷ್ಟ ದರವಾಗಿದ್ದು,ಚರ್ಚಿಸಿ ಮಂಜೂರು ಮಾಡಲಾಯಿತು. ಮತ್ತು ಅನುಮೋದನೆಗಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಕಳುಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 418: ಉಳ್ಳಾಲ ಪುರಸಭೆ ವ್ಯಾಪ್ತಿಯ 7ನೇ ವಾರ್ಡುನ ಮಿಲ್ಲತ್ ನಗರ ಇಲ್ಯಾಸ್ ಮೇಸ್ತ್ರಿಯವರ ಮನೆಯ ಎದುರಿನ ಓಣಿಗೆ ಚರಂಡಿ ಮತ್ತು ರಸ್ತೆ ಕಾಂಕ್ರೀಟಿಕರಣ ಮಾಡುವರೇ ಸ್ಥಳೀಯ ಸದಸ್ಯರಾದ ಶ್ರೀ ಫಾರೂಕ್ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಹಣಕಾಸು ಲಭ್ಯವಿದ್ದಲ್ಲಿ ಕಾಮಗಾರಿ ಮಾಡಿಸಲು ನಿರ್ಣಯಿಸಲಾಯಿತು.

ವಿಷಯ:419: ಉಳ್ಳಾಲ ಪುರಸಭಾ ವ್ಯಾಪ್ತಿಯ 4ನೇ ವಾರ್ಡುನ ಮೋಗವೀರ ಪಟ್ನದಲ್ಲಿ ನೀರು ಸೋರುವಿಕೆಯ ಟ್ಯಾಂಕಿಯನ್ನು ದುರಸ್ತಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಡಿ ಉಳ್ಳಾಲ್ ಇವರ ಮನವಿ ಕುರಿತು
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 420: ಉಳ್ಳಾಲ ಪುರಸಭೆ ವ್ಯಾಪ್ತಿಯ 18ನೇ ವಾರ್ಡುನ ಓವರ್ ಬ್ರಿಡ್ಜ್ ವಾಸುಕಿ ನಗರದಲ್ಲಿರುವ ಸರ್ಕಾರಿ ಬಾವಿಯನ್ನು ದುರಸ್ತಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಯಾನಂದ ತೊಕ್ಕೋಟ್ಟು ಇವರ ಮನವಿ ಕುರಿತು
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 421:ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ 15ನೇ ವಾರ್ಡಿನ ಧರ್ಮನಗರ ತೆಂಗಿನಹಿತ್ಲು ಪ್ರದೇಶಕ್ಕೆ ನೀರು ಸರಬರಾಜು ವ್ಯವಸ್ಥೆಗಾಗಿ ಧರ್ಮನಗರ ಗುಳಿಗಬನದಿಂದ ತೆಂಗಿನಹಿತ್ಲು ನಾರಾಯಣ ಮನೆಯವರೆಗೆ ಸುಮಾರು 360ಮೀ 2ಇಂಚು ಕೊಳವೆಸಾಲು ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಮಹಾಲಕ್ಷ್ಮಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.
ವಿಷಯ: 422: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡು ಕಾಫಿಕಾಡು ಕೃಷ್ಣಭಜನಾ ಮಂದಿರದ ಎದುರುಗಡೆ ಪೈಪುಲೈನು ವಿಸ್ತರಣೆ ಕಾಮಗಾರಿ ಮಾಡಿದ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಘಟನೋತ್ತರ ಮಂಜೂರಾತಿ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:423: ಉಳ್ಳಾಲ ಪುರಸಭೆ ವ್ಯಾಪ್ತಿಯ 25ನೇ ವಾರ್ಡು ಪ್ರಿನ್ಸ್‌ರವರ ಮನೆ ಮುಂದೆ ಸುಮಾರು ಸ್ಥಳ ಇದ್ದು ಅದಕ್ಕೆ ಆವರಣಗೋಡೆ ರಚನೆ ಹಾಗೂ ಪಕ್ಕದಲ್ಲಿರುವ ಸರಕಾರಿ ಬಾವಿಗೆ ಕಲ್ಲು ಕಟ್ಟುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಜಾಗವು ಸರಕಾರಿ ಜಾಗವಾಗಿದ್ದಲ್ಲಿ ಉಳ್ಳಾಲ ಪುರಸಭೆ ನೌಕರರಿಗೆ ವಸತಿಗೃಹ ನಿರ್ಮಾಣ ಮಾಡಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

ವಿಷಯ: 424: ಉಳ್ಳಾಲ ಪುರಸಭೆ ವ್ಯಾಪ್ತಿಯ 6ನೇ ವಾರ್ಡಿನ ಹೊಯಿಗೆ ಹೆಂಡ್ರಿ ಡಿಸೋಜರ ಮನೆ ಮುಂದಿನಿಂದ ಪೆಲ್ಸಿ ಡಿಸೋಜರ ಮನೆವರೆಗೆ ಮಣ್ಣು ಹಾಕಿ ರಸ್ತೆ ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ಸುಂದರ ಉಳಿಯ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 425: ಉಳ್ಳಾಲ ಪುರಸಭೆ ವ್ಯಾಪ್ತಿಯ 6ನೇ ವಾರ್ಡು ಹೊಯಿಗೆ ಪಡ್ಡಾಯಿ ರಸ್ತೆಯಿಂದ ರೋಬರ್ಟ್ ಡಿಸೋಜ ಮನೆ ಹಿಂದಿನಿಂದ ಮಣ್ಣು ಹಾಕಿ ರಸ್ತೆ ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ಸುಂದರ ಉಳಿಯರವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 426: ಉಳ್ಳಾಲ ಪುರಸಭೆ ವ್ಯಾಪ್ತಿಯ 26ನೇ ವಾರ್ಡಿನ ಪಟ್ಲಾ ಸಸಿಹಿತ್ಲು ಬಳಿ ಮಹಮ್ಮದ್ ನಾಸೀರ್ ಬಳಿ ಇರುವ ತೋಡಿಗೆ 200ಮೀಟರ್ ಉದ್ದಕ್ಕೆ 2 ಮೀಟರ್ ಎತ್ತರದಲ್ಲಿ ತಡೆಗೋಡೆ ರಚಿಸಿ 100ಲೋಡು ಮಣ್ಣು ಹಾಕಿ ಸಮತಟ್ಟು ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ್ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 427: ಉಳ್ಳಾಲ ಪುರಸಭೆ ವ್ಯಾಪ್ತಿಯ 26ನೇ ವಾರ್ಡಿನ ಸೇವಂತಿಗುಡ್ಡೆಯಲ್ಲಿ 6 ಕಡೆ 20ಮೀ ಉದ್ದದ ಮೆಟ್ಟಿಲು ರಚನೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 428: ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡಿನ ತಾರಿಪಡ್ಪುವಿನಲ್ಲಿ ಪಂಚಾಯತ್ ಬಾವಿ ಹತ್ತಿರದವರೆಗೆ ಬೋಲ್ಡರ್ಸ್ ಮತ್ತು ಜಲ್ಲಿ ಹಾಕಿ 75ಮೀ ಉದ್ದದ ರಸ್ತೆ ರಚನೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 429: ಉಳ್ಳಾಲ ಪುರಸಭೆ ವ್ಯಾಪ್ತಿಯ 22ನೇ ವಾರ್ಡುನ ತೊಕ್ಕೋಟ್ಟು ಮಸೀದಿಯ ಹಿಂಭಾಗದ ರಸ್ತೆಗೆ ಮಣ್ಣು ಹಾಕಿ ಅಭಿವೃದ್ದಿಗೊಳಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ಯು.ಎಚ್. ಫಾರೂಕ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:430:ಉಳ್ಳಾಲ ಪುರಸಭೆ ವ್ಯಾಪ್ತಿಯ 22ನೇ ವಾರ್ಡುನ ತೊಕ್ಕೋಟ್ಟು ಮಸೀದಿಯ ಹಿಂಬಾಗದಲ್ಲಿ ಪೈಪುಲೈನು ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಯು.ಎಚ್. ಪಾರೂಕ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 431: ಉಳ್ಳಾಲ ಪುರಸಭೆ 2008-09ನೇ ಸಾಲಿಗೆ ಕಾದಿರಿಸಿದ ಶೇ18ರ ನಿಧಿಯಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಧನ ನೀಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಶ್ರೇಯಸ್ ಬಿನ್ ಗೋವಿಂದನಾಯ್ಕ್ ಸೈಂಟ್ ಸೆಬಾಸ್ಟಿಯನ್ ಪ್ರಾಥಮಿಕ ಶಾಲೆ, 3ನೇ ತರಗತಿ ಇವರಿಗೆ ರೂ 1000-00 ಪ್ರೋತ್ಸಾಹಧನ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:432: ಉಳ್ಳಾಲ ಪುರಸಭೆ ವ್ಯಾಪ್ತಿಯ 8ನೇ ವಾರ್ಡಿನ ಶೀನ ಕಂಪೌಂಡು ಬಳಿ ಕೊಳವೆ ನಾದುರಸ್ತಿಯಲ್ಲಿದ್ದು 150ಮೀಟರ್ ಕೊಳವೆ ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಸಹಿ
ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ